C.R.P.67

| |
|---|
| Form No.4 (Civil)<br>Deposition Sheets<br>(R.P.No.57) |

**_1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,_**
**_ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು._**

**ಎಸ್ ಸಿ ಸಂಖ್ಯೆಃ 31/2015**

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 23.09.2024**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

6. ನಂತರ 2ನೇ ಆರೋಪಿ ಕೃಷ್ಣ ಸದರಿ ಮನೆ ಒಳಗಡೆ ಹೋಗಿ ಮನೆ ಒಳಗಡೆ ಇದ್ದ ಅಲಮೆರಾವನ್ನು ತೆರೆದು ಅದರಲ್ಲಿದ್ದ ಒಂದು ಗೋಲ್ಡ್ ಕೇಸಿನ ಟೈಟಾನ್ ವಾಚನ್ನು ಹಾಜರುಪಡಿಸಿದನು. ಸದರಿ ವಾಚನ್ನು ಪಂಚರಾದ ಎಲ್. ಎನ್. ನರಸಿಂಹಮೂರ್ತಿ ಮತ್ತು ಮಂಜುನಾಥ ರವರ ಸಮಕ್ಷಮ ಮಧ್ಯಾಹ್ನ 12-40 ರಿಂದ 1-30 ರ ವರೆಗೆ ಮಹಜರ್ ಕ್ರಮ ಜರುಗಿಸಿ ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ಅಮಾನತು ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ-8 ಎಂದು ಗುರುತಿಸಲಾಗಿದೆ. **ಸಾಕ್ಷಿಯ ಸಹಿಯನ್ನು ನಿ.ಪಿ-8(ಬಿ)** ಎಂದು ಗುರುತಿಸಲಾಯಿತು. ನಂತರ ಅಮಾನತುಪಡಿಸಿಕೊಂಡ ಮಾಲನ್ನು ಮಾಲುಪಟ್ಟಿ ಸಂಖ್ಯೆ 50/2014ರಲ್ಲಿ ಅಳವಡಿಸಿಕೊಂಡಿರುತ್ತೇನೆ.

7. ದಿನಾಂಕ 27.04.2014 ರಂದು ಈ ಪ್ರಕರಣದ ಫಿರ್ಯಾದುದಾರರಾದ ರಘು ಮತ್ತು ಸಂತೋಷ್ ರವರನ್ನು ಪೋಲೀಸ್ ಠಾಣೆಗೆ ಬರಮಾಡಿಕೊಂಡು ಅಮಾನತು ಪಡಿಸಿಕೊಂಡಿದ್ದ ಸದರಿ ವಾಚನ್ನು ಅವರಿಗೆ ತೋರಿಸಿರುತ್ತೇನೆ. ಫಿರ್ಯಾದುದಾರರಾದ ರಘುರವರು ಸದರಿ ವಾಚನ್ನು ನೋಡಿ ತಮ್ಮದು ಎಂದು ಗುರುತಿಸಿರುತ್ತಾರೆ. ನಾನು ಸದರಿ ರಘು ರವರ ವಿವರವಾದ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ನಂತರ ಅದೇ ದಿವಸ ಸಂತೋಷ್ ಮತ್ತು ಪಂಚರಾದ ನರಸಿಂಹಮೂರ್ತಿ ಮತ್ತು ಮಂಜುನಾಥ್ ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

8. ದಿನಾಂಕ 28.04.2014 ರಂದು ಪೋಲೀಸ್ ವಶಕ್ಕೆ ಪಡೆದಿದ್ದ 1 ರಿಂದ 5ನೇ ಅರೋಪಿತರನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಈ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ 6ನೇ ಆರೋಪಿ ರಾಜನ ಪತ್ತೆಗಾಗಿ ಸಿಬ್ಬಂದಿಗಳಾದ ಮಲ್ಲಗುಂಡಿ ಮತ್ತು ನಾರಾಯಣಸ್ವಾಮಿರವರನ್ನು ನೇಮಕ ಮಾಡಿರುತ್ತೇನೆ.

ನಂತರ ಆರೋಪಿತರ ವಿರುದ್ದ ಕಲಂ 395 ಐಪಿಸಿ ಅಡಿ ದೋಷಾರೋಪಣ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

9. ದಿನಾಂಕ 14.07.2014 ರಂದು 6ನೇ ಆರೋಪಿ ರಾಜನನ್ನು ಸಿಬ್ಬಂದಿಗಳಾದ ಮಲ್ಲಗುಂಡಿ ಮತ್ತು ನಾರಾಯಣಸ್ವಾಮಿರವರು ನನ್ನ ಮುಂದೆ ಬೆಳಗ್ಗೆ 11-40 ಕ್ಕೆ ಹಾಜರುಪಡಿಸಿರುತ್ತಾರೆ. ಸದರಿ ಆರೋಪಿಯನ್ನು ವಿಚಾರಣೆ ಮಾಡಿ ದಸ್ತಗಿರಿ ಕ್ರಮ ಅನುಸರಿಸಿ ಆತನ ಸ್ವಇಚ್ಛಾ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ನಂತರ 6ನೇ ಆರೋಪಿಯ ವೈದ್ಯಕೀಯ ಪರೀಕ್ಷೆ ಮಾಡಿಸಿ ಆತನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ ದಿನಾಂಕ 18.07.2014ರ ವರೆಗೆ ಪೋಲೀಸ್ ವಶಕ್ಕೆ ಪಡೆದುಕೊಂಡಿರುತ್ತೇನೆ. 6ನೇ ಆರೋಪಿ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ನನ್ನನ್ನು ಕರೆದುಕೊಂಡು ಹೋದರೆ ನಾವು ಇಬ್ಬರು ಹುಡುಗರಿಗೆ ಹೆದರಿಸಿ ಎಟಿಎಮ್ ನಿಂದ ಹಣ ಡ್ರಾ ಮಾಡಿದ ಜಾಗ ಮತ್ತು ಲಾರಿ ಡ್ರೈವರ್ ಗೆ ಹೊಡೆದ ಜಾಗ, ನಾವು ಲಾರಿ ಟೈಯರ್ ಮತ್ತು ಡಿಸೆಲ್ ಅನ್ನು ಮಾರಿರುವ ವ್ಯಕ್ತಿಯನ್ನು, ನಾನು ಇಟ್ಟಿರುವ ಮೊಬೈಲ್ ಅನ್ನು ತೋರಿಸಿಕೊಡುತ್ತೇನೆ ಎಂದು ಹೇಳಿರುತ್ತಾನೆ. **6ನೇ ಆರೋಪಿಯ ಸದರಿ ಸ್ವಇಚ್ಛೆಯ ಹೇಳಿಕೆಯ ಭಾಗವನ್ನು ನಿ.ಪಿ-33** ಎಂದು ಗುರುತಿಸಲಾಯಿತು. **ಸಾಕ್ಷಿಯ ಸಹಿಯನ್ನು ನಿ.ಪಿ-33(ಎ)** ಎಂದು ಗುರುತಿಸಲಾಯಿತು. 6ನೇ ಆರೋಪಿಯ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ನಿ.ಪಿ-33 ರಲ್ಲಿ **6ನೇ ಆರೋಪಿಯ ಸಹಿಯನ್ನ**ು ಈಗ ನೋಡುತ್ತಿದ್ದು, ಅದನ್ನು **ನಿ.ಪಿ-33(ಬಿ)** ಎಂದು ಗುರುತಿಸಲಾಯಿತು.

10. ದಿನಾಂಕ 15.07.2014 ರಂದು 6ನೇ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ಸದರಿ ಮೊಬೈಲ್ ಮತ್ತು ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ, ನಾನು ಪಂಚರಾದ ನರಸಿಂಹಮೂರ್ತಿ ಮತ್ತು ಶಿವಕುಮಾರ್ ರವರನ್ನು ಪೋಲೀಸ್ ಠಾಣೆಗೆ ಬರಮಾಡಿಕೊಂಡು ಅವರಿಗೆ ನೋಟೀಸು ಜಾರಿ ಮಾಡಿ ವಿಚಾರವನ್ನು ತಿಳಿಸಿದಾಗ ಅವರು ಪಂಚರಾಗಿ ಬರಲು ಒಪ್ಪಿಕೊಂಡಿರುತ್ತಾರೆ. ನಂತರ ನಾನು ನನ್ನ ಇಲಾಖಾ ಜೀಪಿನಲ್ಲಿ 6ನೇ ಆರೋಪಿ, ಪಂಚರಾನ್ನು ಮತ್ತು ಸಿಬ್ಬಂದಿಗಳನ್ನು ಕರೆದುಕೊಂಡು ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಹಣ್ಣಾರು ಗ್ರಾಮಕ್ಕೆ ಕರೆದುಕೊಂಡು ಹೋದೆವು. ಅಲ್ಲಿ 6ನೇ ಆರೋಪಿ ತನ್ನ ಅಜ್ಜಿ ಕೆಂಪಮ್ಮ ರವರ ಮನೆಯನ್ನು ತೋರಿಸಿದನು. ನಾವು ಜೀಪನ್ನು ನಿಲ್ಲಿಸಿದೆವು. ನಂತರ ಆರೋಪಿ ನಮ್ಮನ್ನು ಸದರಿ ಮನೆಯ ಒಳಗಡೆ ಕರೆದುಕೊಂಡು ಹೋದನು. ಸದರಿ ಮನೆಯ ಒಳಗಡೆ ಇದ್ದ ಅಲಮೆರಾವನ್ನು ತೆಗೆದು ಅದರಲ್ಲಿದ್ದ ಒಂದು ಮೈಕ್ರೋಮ್ಯಾಕ್ಸ್ ಮೊಬೈಲನ್ನು ತೆಗೆದು ನನ್ನ ಮುಂದೆ ಹಾಜರುಪಡಿಸಿದನು. ನಂತರ ನಾನು ಸದರಿ ಮೊಬೈಲ್ ಅನ್ನು ಮಧ್ಯಾಹ್ನ 12-30 ಇಂದ 1-30 ಗಂಟೆವರೆಗೆ ಮಹಜರ್ ಕ್ರಮ ಜರುಗಿಸಿ ಅಮಾನತು ಪಡಿಸಿಕೊಂಡಿರುತ್ತೇನೆ. ಸದರಿ ಅಮಾನತು ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ-9 ಎಂದು ಗುರುತಿಸಲಾಗಿದೆ **ಸಾಕ್ಷಿಯ ಸಹಿಯನ್ನು ನಿ.ಪಿ-9(ಬಿ)** ಎಂದು ಗುರುತಿಸಲಾಯಿತು. ಸದರಿ ಮೊಬೈಲ್ ಅನ್ನು ಮಾಲುಪಟ್ಟಿ ಸಂಖ್ಯೆ

63/2014 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ನಂತರ 6ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

11. ನಂತರ 6ನೇ ಆರೋಪಿಗೆ ಸೇರಿದ ಟಾಟಾ ಮ್ಯಾಜಿಕ್ ವಾಹನವನ್ನು ಟಾಟಾ ಫೈನಾನ್ಸ್ ರವರು ಸೀಜ್ ಮಾಡಿ ತೆಗೆದುಕೊಂಡು ಹೋಗಿದ್ದರು. ಸದರಿ ವಾಹನವನ್ನು ಸೀಜ್ ಮಾಡಿದ್ದ ನವೀನ್ ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ನಂತರ ಠಾಣೆಗೆ ಬಂದು ಈ ಕೇಸಿನ ಫಿರ್ಯಾದಿಯ ಸ್ನೇಹಿತನಾದ ಸಂತೋಷ್ ರವರನ್ನು ಠಾಣೆಗೆ ಕರೆಸಿ ಸದರಿ ಮೊಬೈಲ್ ಅನ್ನು ತೋರಿಸಿದಾಗ, ಸಂತೋಷ್ ರವರು ಸದರಿ ಮೊಬೈಲ್ ತಮ್ಮದು ಎಂದು ಗುರುತಿಸಿ ಹೇಳಿಕೆ ನೀಡಿರುತ್ತಾರೆ. ನಂತರ ಪಂಚರಾದ ನರಸಿಂಹಮೂರ್ತಿ ಮತ್ತು ಶಿವಕುಮಾರ್ ರವರ ಹೇಳಿಕೆ ಮಾಡಿಕೊಂಡಿರುತ್ತೇನೆ. ನಂತರ ಈ ಕೃತ್ಯಕ್ಕೆ ಟಾಟಾ ಮ್ಯಾಜಿಕ್ ವಾಹನದ ಮಾಲೀಕರಾದ ವಿಷಕಂಠ ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ವಿಷಕಂಠ ರವರು ಸದರಿ ಟಾಟಾ ವಮ್ಯಾಜಿಕ್ ವಾಹನವನ್ನು 6ನೇ ಆರೋಪಿಗೆ ಮಾರಾಟ ಮಾಡಿಲು ಅಗ್ರೀಮೆಂಟ್ ಮಾಡಿಕೊಂಡಿರುತ್ತಾರೆ. ನಾನು ವಿಷಕಂಠ ರವರರಿಂದ ಸದರಿ ಅಗ್ರೀಮೆಂಟ್ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ತಮ್ಮ ಕಡತದಲ್ಲಿದ್ದ ಸದರಿ ಅಗ್ರೀಮೆಂಟ್ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ಸದರಿ **ಅಗ್ರೀಮೆಂಟನ್ನು ನಿಪಿ-34** ಎಂದು ಗುರುತಿಸಲಾಯಿತು. ನಂತರ ಅದೇ ದಿನ ಟಾಟಾ ಫೈನಾನ್ಸ್ ಕಂಪನಿಯವರಿಗೆ ಸದರಿ ಟಾಟಾ ಮ್ಯಾಜಿಕ್ ವಾಹನವನ್ನು ಮತ್ತು ವಾಹನದ ದಾಖಲಾತಿಗಳನ್ನು ಹಾಜರುಪಡಿಸುವಂತೆ ನೋಟೀಸ್ ಜಾರಿ ಮಾಡಿರುತ್ತೇನೆ. ಸಾಕ್ಷಿಯು ತಮ್ಮ ಕಡದಲ್ಲಿದ್ದ ಸದರಿ ನೋಟೀಸನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ಸದರಿ **ನೋಟೀಸನ್ನು ನಿಪಿ-35** ಎಂದು ಗುರುತಿಸಲಾಯಿತು.

12. ದಿನಾಂಕ:25.07.02014 ರಂದು ಟಾಟಾ ಫೈನಾನ್ಸ್ ಕಂಪನಿಯವರು ನೀಡಿದ ವಾಹನದ ದಾಖಲೆಯನ್ನು ಪಡೆದುಕೊಂಡಿರುತ್ತೇನೆ. ಟಾಟಾ ಫೈನಾನ್ಸ್ ಕಂಪನಿಯವರು ನೀಡಿದ ದಿನಾಂಕ:24.07.2014ರ ಪತ್ರ ಮತ್ತು **ವಾಹನದ ದಾಖಲಾತಿಗಳ ದಾಖಲೆಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಪಿ-36** ಎಂದು ಗುರುತಿಸಲಾಯಿತು. ನಂತರ ದಿನಾಂಕ:01.09.2014 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಡ್ಯ ರವರಿಗೆ ಸದರಿ ವಾಹನದ ಬಿ ಎಕ್ಸ್ ಟ್ರಾಕ್ಟ್ ಅನ್ನು ನೀಡುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ. ನಂತರ ದಿನಾಂಕ:02.09.2014 ರಂದು ಪ್ರಾದೇಶಿಕ ಸಾರಿಗೆ ಮಂಡ್ಯ ರವರಿಂದ ಬಿ ಎಕ್ಸ್ ಟ್ರಾಕ್ಟ್ ಅನ್ನು ಪಡೆದಿರುತ್ತೇನೆ. ಸದರಿ **ಬಿ ಎಕ್ಸ್ ಟ್ರಾಕ್ಟ್ ಅನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-37** ಎಂದು ಮತ್ತು **ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-37(ಎ)** ಎಂದು ಗುರುತಿಸಲಾಯಿತು. ನಂತರ 6ನೇ ಆರೋಪಿಯ ವಿರುದ್ಧ ತನಿಖೆ ಪೂರ್ಣಗೊಳಿಸಿ ಅಪರ ದೋಷಾರೋಪಣಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಈ ದಿವಸ 6ನೇ ಆರೋಪಿ ಗೈರು ಹಾಜರಿದ್ದು, 6ನೇ ಆರೋಪಿ ಪರ ವಕೀಲರು ವಿನಾಯತಿ ಅರ್ಜಿ

ಸಲ್ಲಿಸಿದ್ದು ಮತ್ತು 6ನೇ ಆರೋಪಿಯ ಗುರುತಿಸುವಿಕೆಗೆ ತಮ್ಮದು ಅಭ್ಯಂತರ ಇಲ್ಲವೆಂದು ಹೇಳಿರುತ್ತಾರೆ. ಅಮಾನತುಪಡಿಸಿಕೊಂಡ ವಾಚು ಮತ್ತು ಮೊಬೈಲ್ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯ ಮುಂದೆ ಹಾಜರಿರುವ 1 ಮತ್ತು 5ನೇ ಆರೋಪಿ ಮತ್ತು ವಿ.ಸಿ. ಮುಖಾಂತರ ಹಾಜರಿರುವ 2 ಮತ್ತು 4ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಅಮಾನತು ಪಡಿಸಿಕೊಂಡ ವಾಚು ಮತ್ತು ಮೊಬೈಲನ್ನು ನೋಡಿದರೆ ಗುರುತಿಬಲ್ಲೆ. ಸಾಕ್ಷಿಯು ವಾಚು ಮತ್ತು ಮೊಬೈಲನ್ನು ನೋಡಿ ಗುರುತಿಸಿದ್ದು, ಅವಗಳನ್ನು ಈಗಾಗಲೇ ಮು.ಮಾ-1 ಮತ್ತು 2 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ**

ಆರೋಪಿತರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.